ಶ್ರೀ ಕೆ. ರಾಮಭಟ್.—ಮಾನ್ಯ ಅಧ್ಯಕ್ಷರೇ. ೧೯೮೧ ರ ಡಿಸೆಂಬರ್‌ನಲ್ಲಿ ಜಾಯಿಂಟ್ ಡೈರೆಕ್ಟರ್ ರವರಿಗೆ ಕಳುಹಿಸಿದ ಸಾರ್ವಜನಿಕರ ಮನವಿ ಇದೆ. ಅಲ್ಲಿ ಆರ್ಟ್ಸ್ ಗ್ರ್ಯಾಜುಯೇಟ್. ಸೈನ್ಸ್ ಗ್ರ್ಯಾಜ್ಯುಯೇಟ್. ಮ್ಯಾಥಮೆಟಿಕ್ ಗ್ರ್ಯಾಜ್ಯುಯೇಟ್ ಅಸಿಸ್ಟೆಂಟ್ ಹುದ್ದೆ. ಫಿಸಿಕಲ್ ಇನ್‌ಸ್ಟ್ರಕ್ಟರ್ ಹೀಗೆ ೫ ಹುದ್ದೆಗಳು ಖಾಲಿ ಇವೆ. ಈ ಅಧ್ಯಾಪಕರು ಇಲ್ಲದೆ ಅಲ್ಲಿ ಬಹಳ ತೊಂದರೆಯಾಗಿರುವ ಬಗ್ಗೆ ಸಾಮೂಹಿಕ ಪಿಟಿಷನ್ ಒಂದಿದೆ. ಆದರೆ ಮಾನ್ಯ ಸಚಿವೆಯರು ೨ ಸ್ಥಾನಗಳು ಖಾಲಿ ಇವೆಯೆಂದು ಹೇಳುತ್ತಿದ್ದಾರೆ. ಹಾಗಾದರೆ ಮಿಕ್ಕ ೩ ಹುದ್ದೆಗಳನ್ನು ಭರ್ತಿ ಮಾಡಿದ್ದಾರೆಯೇ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ನನಗೆ ಬಂದಿರುವ ಅಂಕಿ ಅಂಶದ ಪ್ರಕಾರ ಅಲ್ಲಿ ಕೇವಲ ೨ ಹುದ್ದೆಗಳು ಖಾಲಿ ಇವೆಯೆಂದು ತಿಳಿದು ಬಂದಿದೆ. ಮುಂಖ್ಯ ಉಪಾಧ್ಯಾಯರ ಹುದ್ದೆಯನ್ನು ಭರ್ತಿ ಮಾಡಿದ್ದೇವೆ, ಇನ್ನೊಬ್ಬರನ್ನು ಆದಷ್ಟು ಜಾಗ್ರತೆ ಭರ್ತಿ ಮಾಡುತ್ತೇವೆ. ಇನ್ನೂ ಕೆಲವಾರು ಹುದ್ದೆಗಳು ಖಾಲಿ ಇವೆಯೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಬಗ್ಗೆ ಪರಿಶೀಲನೆ ಮಾಡಿ ಆದಷ್ಟು ಬೇಗ ಆ ಪೋಸ್ಟ್‌ಗಳನ್ನು ಫಿಲಪ್ ಮಾಡುವುದಕ್ಕೆ ನಾವು ಪ್ರಯತ್ನ ಪಡುತ್ತೇವೆ.

ಶ್ರೀ ಕೆ. ರಾಮಭಟ್ —ಈ ಶಾಲೆಯ ಎಸ್. ಎಸ್. ಎಲ್, ಸಿ. ರಿಸಲ್ಟ್ ಬ್ಲೋಡಿ ಆದಷ್ಟು ಬೇಗ ಎಂದರೆ, ಎಷ್ಟನೇ ತಾರೀಖಿನೊಳಗೆ ಭರ್ತಿ ಮಾಡುತ್ತೀರೆಂದು ಹೇಳಿ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಇಡೀ ರಾಜ್ಯದಲ್ಲಿ ಹೈಸ್ಕೂಲ್‌ಗಳಲ್ಲಿ ೧೬೦ಹುದ್ದೆಗಳು ಖಾಲಿ ಇದ್ದವು ಹಿಂದಿನ ವರ್ಷ ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡಿದವು. ಆದರೆ ಸ್ಟೇ ಆರ್ಡರ್ ಬಂದುದರಿಂದ ವೇಕೆನ್ಸಿಸ್ ಫಿಲಪ್ ಮಾಡುವುದಕ್ಕೆ ಆಗಲಿಲ್ಲ. ಇತ್ತೀಚೆಗೆ ಸ್ಟೇ ವೆಕೇಟ್ ಆಗಿದೆ. ಇನ್ನು ಒಂದು ವಾರದಲ್ಲಿ ಎಲಾ ಜಾಗವನ್ನು ನಾವು ಭರ್ತಿ ಮಾಡುತ್ತೇನೆ.

Stock of waste silk in the State.

1122 SRI M. C. BASAPPA (Chamarajanagar).—Will the Minister for Law and Parliamentary Affairs, Veterinary and Animal Husbandry be pleased to state.—

(a) whether it has come to the notice of the Government that there is a Huge Stock of waste silk available in the State ;

(b) whether the Government is thinking of the ways and means of utilising the same :

(c) whether Government is thinking of giving protection to the reelers who are producers of waste silk ?

SRI Y. RAMAKRISHNAC(Minister for Law and Parlimentary Affairs Veterinary and Animal Husbandry).—

(a) Yes.
(b) Yes.
(c) Yes.

ಶ್ರೀ ಎಂ. ಎನ್. ಆತ್ಮಾನಂದ (ಶ್ರೀ ಎಂ. ಸಿ. ಬಸಪ್ಪ ಅವರ ಪರವಾಗಿ).—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಇರುವ ನಿರುಪಯುಕ್ತ ರೇಷ್ಮೆಯ ಅಂದಾಜು ಎಷ್ಟು ಸ್ವಾಮಿ ?

ಶ್ರೀ ವೈ. ರಾಮಕೃಷ್ಣ—ಇಲ್ಲಿಯತನಕ ಈ ನಿರುಪಯುಕ್ತ ರೇಷ್ಮೆಗೆ ವಿದೇಶೀ ಮಾರುಕಟ್ಟೆಯಲ್ಲಿ ಬೇಡಿಕೆ ಇತ್ತು. ಈಗ ಅದಕ್ಕೆ ವಿದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲ. ಈ ರೆಷ್ಮೆ ೧೧–೧೨–೧೩ ರೂಪಾಯಿಗಳಿಗೆ ಹೋಗುತ್ತಿದೆ. ಅದಕೋಸ್ಕರ ಹೆಚ್ಚಿನ ಬೆಲೆ ಸಿಗುತ್ತಿಲ್ಲ.

ಶ್ರೀ ಎಂ.ಎಸ್. ಆತ್ಮಾನಂದ.—ಈ ರೇಷ್ಮೆಯನ್ನು ಉಪಯೋಗಿಸಿಕೊಳ್ಳುವ ಮಾರ್ಗೋಪಾಯ ಏನನ್ನು ಸರ್ಕಾರ ಕಂಡುಹಿಡಿದಿದೆಯೇ ? ಈ ನಿರುಪಯುಕ್ತ ರೇಷ್ಮೆಯನ್ನು ರಾ-ಮೆಟೀರಿಯಲ್ ಎಂದು ಒಪ್ಪಿಕೊಂಡು ಯಾವುದಾದರೂ ಇಂಡಸ್ಟ್ರೀಸ್ ಪ್ರಾರಂಭ ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತದೆಯೋ ?

ಶ್ರೀ ವೈ. ರಾಮಕೃಷ್ಣ.—ಈಗ ಸರ್ಕಾರದ ವತಿಯಿಂದ ಚನ್ನಪಟ್ಟಣದಲ್ಲಿ ನಡೆಯುತ್ತಿರುವ ವಸ್ಪನ್ ಸಿಲ್ಕ್ ಮಿಲ್ ಏನಿದೆ ಅದರ ಕೆಪ್ಯಾಸಿಟಿಯನ್ನು ೧,೫೦೦ ಮೆಟ್ರಿಕ್ ಟನ್‌ನಿಂದ ೧೮೬೦ ಮೆಟ್ರಿಕ್ ಟನ್‌ಗೆ ಏರಿಸುವ ಬಗೆ ಸ್ಕೀಮ್ ಹಾಕಿದ್ದೇವೆ ವಿಶ್ವ ಬ್ಯಾಂಕ್ ನೆರವಿನಿಂದ ೧೧ ಕೋಟಿ ೫೦ ಲಕ್ಷ ರೂಪಾಯಿಗಳ ಯೋಜನೆ ಮಾಡಲು ಕೇಂದ್ರ ಸರ್ಕಾರದ ಅಪ್ರೂವಲ್‌ಗೆ ಒಂದು ಯೋಜನೆ ಕಳುಹಿಸಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದ ಆದೇಶ ಬಂದ ಮೇಲೆ ನಾವು ಕೆಲಸ ಪ್ರಾರಂಭ ಮಾಡುತ್ತೇವೆ. ಆಗ ಇದರ ಬಳಕೆ ಸಂಪೂರ್ಣವಾಗಿ ಈ ಫ್ಯಾಕ್ಟರಿಯಲ್ಲಿ ಆಗುತ್ತದೆ.

ಶ್ರೀ ಎಚ್. ಗಂಗಾಧರನ್.—ಆನ್ಯುಯಲ್ ವೇಸ್ಟೇಜ್ ಎಷ್ಟು ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—೧,೫೦೦ ಟನ್.

Construction of Bridge at Vadakegudla village, Chicknayakanahalli Taluk.

1220 SRI N. BASAVIAH (Chicknayakanahalli).—Will the Minister for Public Works be pleased to state.—

(a) whether it has come to the notice of the Government that construction work of the bridge near Vadakegudla village, Kandekere Hobli, Chicknayakanahalli Taluk, has become stand still :

(b) if so, the period within which this work would be completed ?

SRI KAGODU THIMMAPPA (Minister for Public Works)—

(a) The work has not been stopped completely, work is being carrid on.

(b) This work would be completed by about March 1983.

ಶ್ರೀ ಎನ್. ಬಸವಯ್ಯ.—ಸ್ವಾಮಿ, ತಮ್ಮ ಉತ್ತರದಲ್ಲಿ ಕೆಲಸ ಸ್ಥಗಿತವಾಗಿಲ್ಲವೆಂದು ಹೇಳಿದ್ದೀರಿ ? ಇದು ಸತ್ಯಕ್ಕೆ ದೂರವಾದುದು. ತಮಗೆ ಸರಿಯಾದಂತಹ ಮಾಹಿತಿಯನ್ನು ಒದಗಿಸಿಲ್ಲವೆಂದು ಕಾಣುತ್ತದೆ. ಒಂದು ವರ್ಷದಿಂದ ಕೆಲಸ ಸಂಪೂರ್ಣವಾಗಿ ಸ್ಥಗಿತಗೊಂಡಿದೆ ಇದಕ್ಕೆ ಕಾರಣವೇನು ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ವರ್ಷದಿಂದ ಕೆಲಸ ನಿಂತುಹೋಗಿಲ್ಲ. ೧೯೮೧-೮೨ ರಲ್ಲಿ abutment spheres have come to two metces below the the deck level. ನಾವು ಕೆಲಸ ಮಾಡಿದ್ದೇವೆ.

ಶ್ರೀ ಎನ್. ಬಸವಯ್ಯ.—ಸ್ವಾಮಿ, ಕೆಲಸ ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು ಟೆಂಡರ್ ಅಗ್ರಿಮೆಂಟ್ ಪ್ರಕಾರ ಎಷ್ಟು ವರ್ಷಗಳಲ್ಲಿ ಮುಗಿಸಬೇಕಾಗಿತ್ತು ?

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಇದರಲ್ಲಿ ತಡವಾಗಿದೆ. ಮೊದಲು ಸುಮಾರು ೨ ೩೭ ಸಾವಿರಕ್ಕೆ ಅಂದಾಜು ಮಂಜೂರಾಗಿತ್ತು. ಈ ಕೆಲಸವನ್ನು ೧೯೮೨ರ ಒಳಗೆ ಪೂರೈಸಬೇಕಾಗಿತ್ತು. ಆದರೆ, ಈ ಮುಂಚೆ ಗುತ್ತಿಗೆದಾರರು ಮಧ್ಯದಲ್ಲಿಯೇ ಬಿಟ್ಟು ಹೋದರು ? ಅವರು ಬಿಟ್ಟು ಹೋದ ಮೇಲೆ ಇಲಾಖೆಯ ಮೂಲಕವೇ ನಾವು ಈ ಕೆಲಸವನ್ನು ಮಾಡಿಸುತ್ತಿದ್ದೇವೆ. ಇದುವರೆಗೆ ೪ ೧೬ ಸಾವಿರ ರೂಪಾಯಿಗಳು ಖರ್ಚಾಗಿದೆ. ಇದರ ಜೊತೆಗೆ ನಮಗೆ ಸಿಮೆಂಟ್ ಕೊರತೆ ಕೂಡ ಇತ್ತು.